**ದಿನಾಂಕಃ 14.05.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ  ಶ್ರೀಮತಿ ಆರ್.ಹೆಚ್.ಕೆ. ವಕೀಲರಿಂದಃ-**

ನನ್ನ ಗಂಡನೊಂದಿಗೆ ಜೀವನ ನಡೆಸಬೇಕು ಎಂದು ನನಗೆ ಆಸೆ ಇದೆ.  ಇವತ್ತಿಗೂ ಸಹ ಆ ಆಸೆ ಇದೆ.  ವಿಚ್ಛೇದನೆ ಪ್ರಕರಣ ಹಿಂಪಡೆದರೆ ನಾನು ಆತನೊಂದಿಗೆ ಜೀವನ ಮಾಡಲು ತಯಾರಿದ್ದೇನೆ.  ನಾನು ಗಂಡನೊಂದಿಗೆ ಹೋಗಲು ತಯಾರಿದ್ದರೆ ಈ ಪ್ರಕರಣ ನಡೆಸುವ ಅವಶ್ಯಕತೆ ಇಲ್ಲಾ ಎಂದರೆ ಸಾಕ್ಷಿಯು ಜೀವನ ನಡೆಸಲು ಬೇಕು ಎಂದು ನುಡಿಯುತ್ತಾರೆ.   ನಾನು ಈಗ ಕಾನೂನು ವಿದ್ಯಾಭ್ಯಾಸ ಮಾಡುತ್ತಿದ್ದೇನೆ ಮತ್ತು ಅದರ ಬಗ್ಗೆ ನನಗೆ ಅರಿವು ಇದೆ.   ನಾನು ದಿಃ 06.03.1998 ರಂದು ಜನಿಸಿರುತ್ತೇನೆ. ಎದುರುದಾರರೊಂದಿಗೆ ಧೈರ್ಯವಾಗಿ ಜೀವನ ನಡೆಸಬಹುದು ಎಂದರೆ ಸಾಕ್ಷಿಯು ನಾನು ತಯಾರಾಗಿದ್ದೇನೆ ಎಂದು ನುಡಿಯುತ್ತಾರೆ.

ನಾನು ಎದುರುದಾರನನ್ನು ಬಿಟ್ಟು ಹೊರಬಂದ ದಿನಾಂಕ ನನಗೆ ನೆನಪಿರುವುದಿಲ್ಲ. ಆತನ ವಿರುದ್ಧ ಚನ್ನಗಿರಿಯಲ್ಲಿ ಪ್ರಕರಣ ದಾಖಲಿಸಿದ್ದೇನೆ. ಸದರಿ ಪ್ರಕರಣ ಈಗ ಯಾವ ಹಂತದಲ್ಲಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರಕರಣವು ಬಾಲ್ಯ ವಿವಾಹ ಪ್ರಕರಣವಾಗಿದ್ದು ಅದರಲ್ಲಿ ನನ್ನ ತಾಯಿ ಮತ್ತು ಅಣ್ಣ ಸಹ 4 ಮತ್ತು 5 ನೇ ಅರೋಪಿಗಳಾಗಿರುತ್ತಾರೆ. ನನ್ನ ತಂದೆ ತಾಯಿಗೆ ಒಟ್ಟು ಇಬ್ಬರು ಮಕ್ಕಳು. ನನ್ನ ತಾಯಿ ಯಾವುದೇ ಕೆಲಸ ಮಾಡುವುದಿಲ್ಲ ಮನೆಯಲ್ಲಿ ಇರುತ್ತಾರೆ. ನನ್ನ ಅಣ್ಣ ಖಾಸಗಿಯಲ್ಲಿ ಕೆಲಸ ಮಾಡುತ್ತಾರೆ. ಆತ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದಿಲ್ಲ. ನಾನು ಸ್ವ ಇಚ್ಛೆಯಿಂದ ಮದುವೆಯಾಗಿರುತ್ತೇನೆ. ಅವರ ಮನೆಯ ಬಗ್ಗೆ ತಿಳಿದುಕೊಂಡಿದ್ದೆ. ನನ್ನ ಮದುವೆ ಸಮಯದಲ್ಲಿ ಆತ ಪ್ರೌಢ ಶಾಲಾ ಶಿಕ್ಷಕರಾಗಿದ್ದರು.

ನನಗೆ ಮದುವೆ ಸಮಯದಲ್ಲಿ 18 ವರ್ಷ ಆಗಿಲ್ಲ ಎಂದು ನನ್ನ ಗಂಡನಿಗೆ ತಿಳಿಸಿದ್ದೆವು. ನನ್ನ ಅಮ್ಮ ಮತ್ತು ಅಣ್ಣ ಆ ಬಗ್ಗೆ ತಿಳಿಸಿದ್ದರು. ಮೌಖಿಕವಾಗಿ ಆ ಬಗ್ಗೆ ತಿಳಿಸಿದ್ದರು. ಸಾಕ್ಷಿ ಮುಂದುವರೆದು ನನ್ನ ಗಂಡನಿಗೆ ನಾನು ಅಪ್ರಾಪ್ತೆ ಎಂದು ಗೊತ್ತಿತ್ತು ಅವರು ಎಲ್ಲಾ ದಾಖಲೆಗಳನ್ನು ನೋಡಿದ್ದರು ಎಂದು ನುಡಿಯುತ್ತಾರೆ. ಮದುವೆ ನಂತರ ಆತ ಮಾನಸಿಕ ಕಿರುಕುಳ ನೀಡಿದ್ದಕ್ಕೆ ನಾನು ಕಾನೂನು ಕ್ರಮ ಕೈಗೊಂಡಿರುತ್ತೇನೆ, ಸಾಕ್ಷಿ ಮುಂದುವರೆದು ನಾನು ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಗಂಡನೊಂದಿಗೆ 4 ವರ್ಷ ಜೀವನ ನಡೆಸಿದ್ದೆ. ನಾನು ಮದುವೆಯಾದ ಒಂದು ತಿಂಗಳ ನಂತರ ನನ್ನ ಗಂಡ ಕಿರುಕುಳ ನೀಡಲು ಪ್ರಾರಂಭಿಸಿದ. ನಾನು ಆತ ನೀಡಿದ ಕಿರುಕುಳವನ್ನು ಸಹಿಸಿಕೊಂಡು ಬರುತ್ತಿದ್ದೆ ಆ ನಂತರ ದೂರು ನೀಡಿರುತ್ತೇನೆ. ನನ್ನ ಮದುವೆಯಾದ ಒಂದೂವರೆ ವರ್ಷ ನಂತರ ನನಗೆ 18 ವರ್ಷ ತುಂಬಿರುತ್ತದೆ.

ನಮ್ಮ ಮದುವೆಯಿಂದ ನಮಗೆ ಒಂದು ಹೆಣ್ಣು ಮಗು ಇದೆ, ಅದಕ್ಕೆ 8 ವರ್ಷ ವಯಸ್ಸು. ನನ್ನ ಮಗಳು ದಿಃ 05.04.2016 ರಂದು ಜನಿಸಿರುತ್ತಾಳೆ. ಮಗು ಹುಟ್ಟಿದ ನಂತರವೂ ಸಹ ನನ್ನ ಗಂಡ ಕಿರುಕುಳ ನೀಡುತ್ತಿದ್ದರು. ನಮ್ಮ ಮಗು ಶಿವಮೊಗ್ಗದಲ್ಲಿ ಜನಿಸಿತು. ಮಗು ಜನಿಸಿದ 4 ತಿಂಗಳ ನಂತರ ನಾನು ಗಂಡನ ಮನೆಗೆ ಹೋಗಿರುತ್ತೇನೆ. ಮಗುವಿನ ನಾಮಕರಣ ದಾವಣಗೆರೆಯ ಗಂಡನ ಮನೆಯಲ್ಲಿ ಜರುಗಿರುತ್ತದೆ, ಸಾಕ್ಷಿ ಮುಂದುವರೆದು ಅದಕ್ಕೆ ನಮ್ಮ ಮನೆಯಿಂದ ಹಣ ನೀಡಿರುತ್ತಾರೆ. ಆ ಬಗ್ಗೆ ದಾಖಲೆ ಇದೆ ಹಾಜರುಪಡಿಸಬಲ್ಲೆ. ವರದಕ್ಷಿಣೆ ನೀಡುತ್ತೇವೆ ಆದರೆ ಎಷ್ಟು ನೀಡಿದ್ದೆವೆ ಎಂದು ಈಗ ನೆನಪಿರುವುದಿಲ್ಲ. ಸದರಿ ವರದಕ್ಷಿಣೆಯನ್ನು ನಗದು ಮತ್ತು ಅಕೌಂಟ್ ಮೂಲಕ ನೀಡಿರುತ್ತೇವೆ.

ನನ್ನ ಗಂಡನೊಂದಿಗೆ ಒಬ್ಬ ಸಹೋದರ ಮತ್ತು ಸಹೋದರಿ ಇದ್ದಾರೆ. ನಾನು ಮದುವೆಯಾದಾಗ ನನ್ನ ಗಂಡನೊಂದಿಗೆ ಆತನ ಸಹೋದರ ಎಲ್ಲರೂ ಒಟ್ಟಿಗೆ ಇದ್ದೆವು. ಸಾಕ್ಷಿ ಮುಂದುವರೆದು ಸಹೋದರಿ ಒಟ್ಟಿಗೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾವು ದಾವಣಗೆರೆ, ಸಂತೆಬೆನ್ನೂರು ಮತ್ತು ಗೊಲ್ಲರಹಳ್ಳಿಯಲ್ಲಿ ಒಟ್ಟಿಗೆ ಇದ್ದೆವು. ನನ್ನ ಗಂಡನ ಸಹೋದರ ಪೋಲಿಸ್ ಇಲಾಖೆಯಲ್ಲಿ ಇದ್ದಾರೆ.

ಅವರು ಇತ್ತೀಚೆಗೆ ಮದುವೆಯಾಗಿದ್ದಾರೆ ಎಂದು ಮಾಹಿತಿ ಇದೆ. ನನ್ನ ಗಂಡನ ಸಹೋದರ ಸರ್ಕಾರಿ ಹುದ್ದೆಯಲ್ಲಿರುವುದರಿಂದ ಆರ್ಥಿಕವಾಗಿ ಸಧೃಡರಾಗಿದ್ದಾರೆ. ಚನ್ನಗಿರಿಯ ಕ್ರಿಮಿನಲ್ ಪ್ರಕರಣದಲ್ಲಿ ನನ್ನ ಗಂಡನ ಸಹೋದರನಾದ ಸಿದ್ದೇಶ್ ರವರೂ ಸಹ ಆರೋಪಿಯಾಗಿದ್ದಾರೆ. ನನ್ನ ಗಂಡನ ಮತ್ತು ಆತನ ಮನೆಯವರ ವಿರುದ್ದ ಒಂದು ಕ್ರಿಮಿನಲ್ ಪ್ರಕರಣ ಬಾಕಿ ಇದೆ. ಒಟ್ಟು ಎರಡು ಪ್ರಕರಣ ದಾಖಲಿಸಿದ್ದೆ. ನನ್ನ ಗಂಡನೇ ಮೊದಲನೇ ಪ್ರಕರಣದಲ್ಲಿ ಬಿ ವರದಿ ಸಲ್ಲಿಸಿ ರಾಜಿ ಮಾಡಿಕೊಂಡರು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ಸದರಿ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ನನ್ನನ್ನು ಕರೆದುಕೊಂಡು ಹೋಗಿ ರಾಜಿ ಮಾಡಿಸಿದರು ಮತ್ತು ನಾನೂ ದಾಖಲೆ ಬರೆದುಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಾತನ ಒತ್ತಾಯದಿಂದ ಕ್ರಿಮಿನಲ್ ಪ್ರಕರಣ ದಾಖಲಿಸಿದೆ ಎಂದು ನಾನು ಪೋಲಿಸರಿಗೆ ಬರೆದುಕೊಟ್ಟ ಮೇರೆಗೆ ಬಿ ವರದಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಬಿ ವರದಿ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ನಾನೇ ಉದ್ದೇಶಪೂರ್ವಕವಾಗಿ ನಾನು ಗಂಡನೊಂದಿಗೆ ಸಂಸಾರ ನಡೆಸಲು ಆಸಕ್ತಿ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಆರ್ ಟಿ ಸಿ ಗಳು ನನ್ನ ಮಾವನ ಹೆಸರಿನಲ್ಲಿದೆ. ನನ್ನ ಮಾವನ ಆಸ್ತಿಯಲ್ಲಿ ಆತನ 3 ಜನ ಮಕ್ಕಳಿಗೂ ಸಮನಾದ ಹಕ್ಕು ಇದೆ ಎಂದರೆ ಸರಿ. ನನ್ನ ಮಾವನಿಗೆ ಸಹೋದರ ಸಹೋದರಿಯರು ಇದ್ದಾರೆ ಎಂದರೆ ಸರಿ. ನಾನು ಹಾಜರುಪಡಿಸಿರುವ ಆರ್ ಟಿ ಸಿ ದಾಖಲೆಗಳು ನನ್ನ ಮಾವನ ಮತ್ತು ಆತನ ಸಹೋದರರ ನಡುವೆ ಇರುವ ವಿಭಾಗದ ಪ್ರಕರಣದಲ್ಲಿ ಇದೆ ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ.

ನನಗೆ ಮದುವೆಯಾಗುವ ಸಮಯದಲ್ಲಿ ಸಂಬಳದ ಬಗ್ಗೆ ತಿಳಿಸಿರಲಿಲ್ಲ ಆದರೆ ಕೆಲಸ ಇದ್ದ ಬಗ್ಗೆ ತಿಳಿಸಿದ್ದರು. ಸದರಿ ಆರ್ ಟಿ ಸಿ ಗಳನ್ನು ನಾನು ವಿಭಾಗದ ದಾವೆಯಿಂದ ಪಡೆದುಕೊಂಡು ಬಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಸಲ್ಲಿಸಿರುವ ವಿಚ್ಚೇದನೆ ಪ್ರಕರಣದಲ್ಲ ನಾನು ಎಷ್ಟು ಬಾರಿ ಹಾಜರಾಗಿದ್ದೇನೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ಪ್ರಕರಣದಲ್ಲೂ ಸಹ ನಾನು ಕಲಂ 24 ರ ಅಡಿಯಲ್ಲಿ ವ್ಯಾಜ್ಯಕ್ಕೆ ವೆಚ್ಚವನ್ನು ಕೇಳಿರುತ್ತೇನೆ. ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನನಗೆ ರೂ. 25,000 ಪರಿಹಾರ ಸಿಕ್ಕಿದ ಬಗ್ಗೆ ಈ ಪ್ರಕರಣದಲ್ಲಿ ತಿಳಿಸಲು ತೊಂದರೆ ಇರಲಿಲ್ಲ. ಸದರಿ ಪರಿಹಾರ ದಿಃ 18.03.2023 ರಂದು ಪಡೆದುಕೊಂಡಿರುತ್ತೇನೆ. ಪರಿಹಾರ ಪಡೆದಿದ್ದರೂ ನಾನು ನನ್ನ ಗಂಡನ ವಿರುದ್ದ ಈ ನ್ಯಾಯಾಲಯದಲ್ಲಿ ಕಾನೂನು ಕ್ರಮ ಕೈಗೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಮಾನಸಿಕ ಮತ್ತು ದೈಹಿಕ ತೊಂದರೆಯಾಗಿದೆ ಎಂದು ದಾಖಲೆ ನೀಡಿರುವುದಿಲ್ಲ. ನನ್ನ ಗಂಡನಿಗೆ ಸಕ್ಕರೆ ಖಾಯಿಲೆ ಇರುವ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ನನ್ನ ಮಾವನಿಗೆ ಅಸ್ತಮಾ ಮತ್ತು ಅತ್ತೆಗೆ ಕಿಡ್ನಿ ಸಮಸ್ಯೆ ಇರುವ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ನಾನು ಸಿದ್ದೇಶ್ ರವರ ವಿರುದ್ದ ಮೇಲಾಧಿಕಾರಿಗಳಿಗೆ ನೀಡಿದ ದೂರು ಈಗ ಯಾವ ಹಂತದಲ್ಲಿದೆ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಅತ್ತೆ ಮಾವ ಪ್ರತ್ಯೇಕ, ನನ್ನ ಗಂಡ ಪ್ರತ್ಯೇಕ ಮತ್ತು ಸಿದ್ದೇಶ್ ಪ್ರತ್ಯೇಕವಾಗಿ ವಾಸವಾಗಿರುವ ಬಗ್ಗೆ ನನಗೆ

ತಿಳಿದಿರುವುದಿಲ್ಲ. ನನ್ನ ತಾಯಿ ಮತ್ತು ಅಣ್ಣ ನಾನು ನೀಡಿದ ದೂರಿನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೋ ಇಲ್ಲವೋ ನನಗೆ ತಿಳಿದಿರುವುದಿಲ್ಲ.

ಇತ್ತೀಚೆಗೆ ನನ್ನ ಅಣ್ಣನಿಗೆ ಮದುವೆಯಾಯಿತು ಎಂದರೆ ಸರಿ. ಎಂಗೇಜ್ ಮೆಂಟ್ ಆದ ನಂತರ ನನ್ನ ಅಣ್ಣ ತನ್ನ ಹೆಂಡತಿ ಮನೆಗೆ ರೂ. 30,000 ದಂಡ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಘಟನೆ ಜರುಗಿರುವುದಿಲ್ಲ. ನಮ್ಮ ಜನಾಂಗದಲ್ಲಿ ಕುಟುಂಬದವರು ಯಾವುದಾದರೂ ಪ್ರಕರಣ ನ್ಯಾಯಾಲಯದಲ್ಲಿ ದಾಖಲಿಸಿ ಆ ಬಗ್ಗೆ ತಿಳಿಸದೇ ಯಾರೋಂದಿಗಾದರೂ ಮದುವೆಯಾದರೆ ಆ ಬಗ್ಗೆ ದಂಡ ಪಾವತಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

ಉದ್ದೇಶಪೂರ್ವಕವಾಗಿ ನನ್ನ ಮಗಳನ್ನು ತಂದೆ ನೋಡದಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಕಾನೂನು ವಿದ್ಯಾಭ್ಯಾಸ ಮಾಡುತ್ತಿದ್ದೇನೆ ಮತ್ತು ಎಲ್ಲೂ ಕಾನೂನು ಅಭ್ಯಾಸ ಮಾಡುತ್ತಿಲ್ಲ. ನಾನು ಈಗ ಕಡೂರಿನಲ್ಲಿ ವಾಸವಾಗಿರುತ್ತೇನೆ. ನನ್ನ ಅಣ್ಣನ ಆದಾಯ ತಿಳಿದಿರುವುದಿಲ್ಲ. ನನ್ನ ಗಂಡ ಮತ್ತು ಆತನ ಮನೆಯವರಿಗೆ ತೊಂದರೆ ನೀಡಲು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ಜೀವನಾಂಶದ ಆದೇಶದ ವಿರುದ್ದ ನನ್ನ ಗಂಡ ಚಿಕ್ಕಮಗಳೂರಿನ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ತಿಳಿದಿದೆ. ನನ್ನ ಗಂಡ ನನ್ನ ಅತ್ತೆ ಮಾವರವರನ್ನು ನೋಡಿಕೊಳ್ಳುತಿರುವುದರಿಂದ ನಾನು ಕೇಳಿದಷ್ಟು ಜೀವನಾಂಶ ನೀಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ನನ್ನೊಂದಿಗೆ ಅನ್ಯೂನ್ಯತೆಯಿಂದ ಇರಬೇಕು ಎಂದು ನನ್ನ ಗಂಡ ಬೇರೆ ಮನೆ ಮಾಡಿದ್ದರು ಎಂದರೆ ಸರಿಯಲ್ಲ. ನನ್ನೊಂದಿಗೆ ಚನ್ನಾಗಿರಬೇಕು ಎಂದು ನನ್ನ ಗಂಡ ನಿವೇಶನ ಖರೀದಿಸಿ ಸಾಲ ಮಾಡಿ ಮನೆ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇರುವ ಮನೆಯನ್ನು ನವೀಕರಿಸಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮತ್ತೂ ಮುಂದುವರೆದು ಅದು ಆಶ್ರಯ ಯೋಜನೆ ಅಡಿ ನೀಡಿದ ಮನೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸರುವುದಿಲ್ಲ. ನನ್ನ ಗಂಡನ ಹೆಸರಿನಲ್ಲಿ ಯಾವುದೇ ಸ್ವತ್ತು ಇಲ್ಲಾ ಎಂದರೆ ಸರಿ. ನನ್ನ ಗಂಡನಿಗೆ ಸರ್ಕಾರಿ ಸಂಬಳ ಬಿಟ್ಟು ಬೇರೆ ಆದಾಯ ಇರದ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನ್ನ ಗಂಡನಿಗೆ ಆದಾಯ ಇದೆ ಎಂದು ತೋರಿಸಲು ದಾಖಲೆ ಸಿಕ್ಕಿದರೆ ಹಾಜರುಪಡಿಸಿರುತ್ತೇನೆ.

ನನಗೆ ಮತ್ತು ಮಗುವಿಗೆ ವಾಸಿಯಾಗದೇ ಇರುವ ಖಾಯಿಲೆ ಇರುವುದಿಲ್ಲ. ಪ್ರಕರಣಗಳನ್ನು ಬಾಕಿ ಇಟ್ಟು ಅವರೊಂದಿಗೆ ಜೀವನ ನಡೆಸಲು ಒಂದು ಅವಕಾಶ ನೀಡಬಹುದಾ ಎಂದರೆ ಸಾಕ್ಷಿಯು ಅವರು ಪ್ರಕರಣಗಳನ್ನು ವಾಪಸ್ಸು ತೆಗೆದ ನಂತರ ಮತ್ತೆ ಕಿರುಕುಳ ನೀಡಲು ಪ್ರಾರಂಭಿಸುತ್ತಾರೆ ಆದ್ದರಿಂದ ಅವರನ್ನು ನಂಬಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನಿಂದ ದೈಹಿಕ ಕಿರುಕುಳಕ್ಕೆ ನಾನು ಆಸ್ಪತ್ರೆಗೆ ದಾಖಲಾಗಿದ್ದೆ ಆದರೆ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ಗಂಡನಿಗೆ ತೊಂದರೆ ನೀಡಲು ಉದ್ದೇಶಪೂರ್ವಕವಾಗಿ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿ 2

ಎಕರೆ ಜಮೀನು ಮತ್ತು 40 x 60 ನಿವೇಶನ ಇರುವ ಬಗ್ಗೆ ತಿಳಿದಿರುವುದಿಲ್ಲ. ನನಗೆ ಪ್ರತ್ಯೇಕ ಯಾವುದೇ ಸ್ವತ್ತು ಇರುವುದಿಲ್ಲ. ನನ್ನ ತಾಯಿ ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು ಆರ್ಥಿಕವಾಗಿ ಸಧೃಡಳಾಗಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.